ಆಶಯಗಳಿಗೆ ಜೋತುಬಿದ್ದಾಗ ನನ್ನ ರಚನೆಯು ಪರಿಶುದ್ಧವಾಗಿರಲು ಸಾಧ್ಯವಿಲ್ಲ ಜೊತೆಗೆ ನನ್ನ ಎದೆಯಾಳದ ಅಪ್ಪಟ ಭಾವಗಳಿಂದ ದೂರವಾಗುತ್ತದೆ. ಮಹಿಳೆಯರ ಬಗ್ಗೆ ಬರೆಯಬೇಕೆಂಬ ಕಾರಣಕ್ಕೆ ಸ್ತ್ರೀ ಸಂವೇದನೆಯ ಕೃತಿಗಳನ್ನು ನಾನು ಬರೆಯುವುದಿಲ್ಲ. ಬದಲಿಗೆ ನಾನು ಬರೆದ ಮಹಿಳೆಯರ ಕುರಿತಾದ ಕೃತಿಗಳು ಖಂಡಿತವಾಗಿ ನನ್ನಾಳದ ನಿಜವಾದ ಭಾವನೆಗಳ ಅಭಿವ್ಯಕ್ತಿಯಾಗಿವೆ. ನನ್ನ ಕೆಲವು ಕೃತಿಗಳಲ್ಲಿ ನೀವು ಉಲ್ಲೇಖಿಸಿದ Ambiguity ಖಚಿತವಾಗಿ ನಿರ್ದಿಷ್ಟ ಹಂತದಲ್ಲಿ ಹಾದುಹೋದ ನೈಜ ಸ್ಥಿತಿ ಮತ್ತು ಯೋಚನೆಗಳ ಸಾಕಾರ ರೂಪವಾಗಿದೆ. ಲಿಂಗದ ಬಗ್ಗೆ ಬರೆದಿರಲಿ ಬರೆಯದಿರಲಿ, ಮಾನವನ ಸ್ಥಿತಿಯು ನಾವು ಗಮನ ಹರಿಸಲೇಬೇಕಿರುವ ವಾಸ್ತವಿಕ ಅಂಶವಾಗಿದೆ. ಅದು ಎಲ್ಲವನ್ನೂ ಒಳಗೊಂಡಿದೆ. ಇನ್ನು ನನ್ನ ಬರವಣಿಗೆಯ ಕೌಶಲಗಳನ್ನ ಬಹಿರಂಗಪಡಿಸುವ ಬದಲು ಮರೆಮಾಚಲು ನಾನು ಬಯಸುತ್ತೇನೆ. ಮತ್ತು ನನ್ನ ಬರವಣಿಗೆಯು ಉದ್ದೇಶಪೂರ್ವಕವಾಗಿ ಬರೆಸಿಕೊಳ್ಳುವುದಕ್ಕಿಂತ ಸ್ವಾಭಾವಿಕವಾಗಿ ಹರಿದುಬರಲೆಂದು ನಾನು ಆಶಿಸುತ್ತೇನೆ.

**◆ ಸಾವು ಮತ್ತು ಪ್ರೇಮದ ಭಾವ ಎಂಥ ನೀರಸ ಅನುಭವವನ್ನೂ ಕ್ಷಣಕಾಲ ವೈಬ್ರೆಂಟ್ ಮಾಡಬಲ್ಲದು. ಈ ಹಿನ್ನೆಲೆಯಲ್ಲಿ, ನಿಮ್ಮ ಕಾವ್ಯದಲ್ಲಿನ ಏಲಿಯನೇಷನ್ ವಿವರಿಸುತ್ತೀರಾ?**

ಪ್ರೀತಿ ಮತ್ತು ಸಾವನ್ನು, ನಮ್ಮ ಬದುಕಿನ ಬಹು ಮುಖ್ಯ ಭಾಗ, ಮನುಷ್ಯನ ಆಲೋಚನೆಗಳ ಮೂಲ ಮತ್ತು ಬಹುತೇಕ ಎಲ್ಲಾ ಕಲಾಕೃತಿಗಳ ಸಾರ ಎನ್ನಬಹುದು. ನಾವು ಯಾವುದೇ ಪ್ರಕಾರ, ಮಾರ್ಗ ಅಥವಾ ಉಪಾಯ, ವಸ್ತುಗಳನ್ನು ಬಳಸಿದರೂ ಕಟ್ಟಕಡೆಗೆ ಈ ವಿಷಯಗಳಿಗೇ ಮರಳುತ್ತೇವೆ. ಮನುಷ್ಯನ ಯೋಚನೆ ಮತ್ತು ಭಾವಗಳು ನದಿಯ ನೀರಿನ ಹಾಗೆ ನಿರಂತರವಾದ ಬದಲಾವಣೆ ಮತ್ತು ಸತತ ಹರಿವಿನಲ್ಲಿರುತ್ತವೆ. ಕಾವ್ಯ ಎಂಬ ಪ್ರಕಾರವು ತತ್‌ಕ್ಷಣದ ಏನನ್ನಾದರೂ ಸೆರೆಹಿಡಿಯಬಲ್ಲುದು. ಒಂಟಿತನ ಮತ್ತು ಪರಕೀಯತೆ ಅಖಂಡ ಬದುಕಿನ ಚೆದುರಿದ ತುಣುಕುಗಳು. ಅವು ಬದುಕಿನ ನಿರ್ದಿಷ್ಟ ಕ್ಷಣಗಳಲ್ಲಿ ವಿಘಟಗೊಂಡು ಧುತ್ತನೆ ಕಾಣಿಸಿಕೊಳ್ಳುತ್ತವೆ ಮತ್ತು ನಾವದನ್ನು ತ್ವರಿತವಾಗಿ ರೂಪಕ ಭಾಷೆಯಲ್ಲಿ ಹಿಡಿದಿಡಬಹುದು. ಆ ವಿಶ್ವಾತ್ಮಕ ಅನುಭವಗಳು ಅಕ್ಷರಗಳಾಗಿ ಪದಗಳಾಗಿ ಮೈದಾಳಿದಾಗ, ಆ ಗಳಿಗೆಯಲ್ಲಿ ಅವಕ್ಕೊಂದು ಆಧ್ಯಾತ್ಮಿಕ ಪ್ರತಿರೂಪ ಪ್ರಾಪ್ತವಾಗಿ ಅವು ಶಾಶ್ವತವಾಗಿ ಉಳಿದುಬಿಡುತ್ತವೆ.

**◆ ಕಾಮ್ರೇಡ್ ಮಾವೋನ 'ಕಲ್ಚರಲ್ ರೆವ್ಯೂಲೂಷನ್' ನಂತರದ ಪರಿಣಾಮಗಳ ಬಗ್ಗೆ ಹೊರ ಜಗತ್ತಿಗೆ ಈಗೀಗ ಅಲ್ಪಸ್ವಲ್ಪ ಗೊತ್ತಾಗುತ್ತಿದೆ. ಆದರೆ 90ರ ದಶಕದ ಜಾಗತೀಕರಣೋತ್ತರ ಚೈನಾದ ಸಮಾಜೋ ರಾಜಕೀಯ ಬದಲಾವಣೆಗಳ ಬಗ್ಗೆ ನಮಗೆ ದಯವಿಟ್ಟು ತಿಳಿಸಿ.**

ನಾನು ಹುಟ್ಟಿದ್ದು 1990ರಲ್ಲಿ. ಜಾಗತೀಕರಣದ ಆರಂಭ ಮತ್ತು ಪ್ರಕ್ರಿಯೆ ನನ್ನ ಬಾಲ್ಯದುದ್ದಕ್ಕೂ ನಡೆಯುತ್ತಿತ್ತು. ನಾನು ಚಿಕ್ಕವಳಿದ್ದಾಗ, ಎಲ್ಲವು ಮುಕ್ತತೆ ಮತ್ತು ಸ್ವಾತಂತ್ರ್ಯದ ದಿಕ್ಕಿನೆಡೆಗೆ ಚಲಿಸುತ್ತಿವೆ ಎಂದು ಭಾವಿಸಿದ್ದೆ. ಅದೊಂದು ತೆರನಾದ ಭ್ರಮೆಯನ್ನ ನನ್ನಲ್ಲಿ ಹುಟ್ಟಿಸಿತ್ತು. ಭವಿಷ್ಯದ ಬಗ್ಗೆ ನನ್ನಲ್ಲಿ ಅನಂತ ಹಂಬಲ ತುಂಬಿತ್ತು ಮತ್ತು ಆದಷ್ಟು ಬೇಗ ಬೆಳೆದು ದೊಡ್ಡವಳಾಗಿ ಈ ಪ್ರಪಂಚದ ವೈವಿಧ್ಯ, ಶ್ರೀಮಂತಿಕೆ, ವೈಭವವನ್ನು ಅನುಭವಿಸಬೇಕೆಂದು ಹಂಬಲಿಸುತ್ತಿದ್ದೆ. ಆದರೆ ಕಾಲ ಬದಲಾಗುತ್ತಾ ಆಳವಾದ ತಿಳಿವಳಿಕೆ ಬೆಳೆದಂತೆಲ್ಲಾ ನನ್ನಲ್ಲಿ ಆತಂಕ ಶುರುವಾಯಿತು. ಅದರಲ್ಲೂ, ವಿಶೇಷವಾಗಿ ಕೋವಿಡ್ ಪಿಡುಗು ತನ್ನ ಗರಿಷ್ಠ ಮಿತಿಯನ್ನು ತಲುಪಿದಾಗ ಆತಂಕ ಹೆಚ್ಚುತ್ತಲೇ ಹೋಯಿತು. ನನ್ನ ಆದರ್ಶಗಳು ಕುಸಿದವು, ಇಡೀ ಪ್ರಪಂಚವೇ ಮುರಿದುಬೀಳುತ್ತಿತ್ತು, ಮತ್ತೆ ನಾನಿದ್ದ ಪ್ರಾಂತ್ಯ ಊಹಿಸಲಾಗದ ವಿಕಾರ ದೃಶ್ಯಗಳಿಂದ ತುಂಬಿಹೋಗಿತ್ತು. ನಾನು ಹತಾಶೆ ಮತ್ತು ಅಸಹಾಯಕತೆ ಅನುಭವಿಸುತ್ತಿದ್ದೆ. ಇದೆಲ್ಲವು ರಾಜಕೀಯ ಮತ್ತು ಸಿದ್ಧಾಂತಕ್ಕೆ ಸಂಬಂಧಿಸಿದ್ದು. ರಾಜಕಾರಣಿಗಳನ್ನ, ಆಳುವ ವರ್ಗದವರನ್ನ ನಾನು ದೂರಲು ಬಯಸುವುದಿಲ್ಲ. ಅವರೆಲ್ಲರೂ ನುರಿತ ಪ್ರದರ್ಶಕರ ಗುಂಪು ಅಷ್ಟೇ. ಅವರು ಜನರ ಅತ್ಯಂತ ನೈಜ ಬದುಕು ಮತ್ತು ಸಹಜ ಸನ್ನಿವೇಶಗಳನ್ನು ನಿರ್ಲಕ್ಷಿಸುತ್ತಾರೆ. ಅಂದರೆ ಪ್ರತಿಯೊಬ್ಬರು ಆಡುವ ಮಾತು ಮತ್ತು ಕ್ರಿಯೆಯು